ಅಂತರಂಗದ ಬೆಳಕಿನಲ್ಲಿ ಬಾಳುತ್ತೇನೆ ಎಂದು ಹೊರಟವನು ಎದುರಿಸಬೇಕಾದ ಸಂದಿಗ್ಧದ ಸನ್ನಿವೇಶ ಇದು.

★★★

ಪ್ರಬಂಧದ ಮೊದಲಿಗೆ ಹೇಳಿದ ಪ್ರಕರಣದ ಗೆಳೆಯರು ಇತ್ತೀಚೆಗೆ ಕರೆ ಮಾಡಿದರು. ''ಬುದ್ಧಿಜೀವಿ ಎಂದರೆ ಯಾರು ಎಂದು ಸಂಶೋಧನೆ ನಡೆಸಿದ್ದೀರಂತೆ'' ಎಂದು ಅವರೇ ನಗುತ್ತಾ ಮಾತಿಗೆ ತೊಡಗಿದರು. ''ಹೌದು ಮಾರಾಯರೇ, ತಾವು ಆವತ್ತು ನನಗೆ ಪೂರ್ಣ ಜ್ಞಾನ ಕೊಡದೇ ಹೋಗಿಬಿಟ್ಟಿರಿ. ಹೊರಡುವಾಗ ನನ್ನ ಮಾತಿಗೆ ಸಿಟ್ಟು ಬೇರೆ ಬಂದಿತು ಅಂತ ಕಾಣುತ್ತದೆ'' ಅಂದೆ. ''ನೋಡಿ, ಯಾವುದನ್ನು ಒಬ್ಬ ವ್ಯಕ್ತಿಯನ್ನು ಕಂಡಕೂಡಲೇ ಪತ್ತೆ ಮಾಡಬಹುದೋ ಅದಕ್ಕೆ ಎಷ್ಟು ಒದ್ದಾಡುತ್ತಿದ್ದೀರಿ, ಏನು ಕತೆ'' ಎಂದರು.

ಮಾತುಕತೆ ದೀರ್ಘವಾಗಿ ನಡೆಯಿತು. ಅದರ ಸಾರವನ್ನಷ್ಟೇ ಇಲ್ಲಿ ಹೇಳಿದರೆ ಸಾಕು. ಬಾಹ್ಯ ಪರೀಕ್ಷೆಗಳಿಂದಲೇ ಬುದ್ಧಿಜೀವಿಯನ್ನು ಗುರುತಿಸಬಹುದು ಅಂದರಲ್ಲ, ಆ ಗುರುತುಗಳು ಹೀಗಿವೆ:



1. ಬುದ್ಧಿಜೀವಿಯು 'ಊದ್ದ' ಜುಬ್ಬಾ ತೊಟ್ಟಿರುತ್ತಾನೆ.
2. ಕೆಳಗಡೆ ದೊಗಳೆ ಪಾಯಿಜಾಮಾ ಅಥವಾ ಜೀನ್ಸ್ ಪ್ಯಾಂಟ್ ತೊಟ್ಟಿರುತ್ತಾನೆ.
3. ವಿಲಕ್ಷಣ ಬಗೆಯ ಗಡ್ಡ ಇರುತ್ತದೆ.
4. ಅನ್ಯಮನಸ್ಕನಂತೆ ಕಾಣುತ್ತಾನೆ.
5. ದೃಷ್ಟಿ ಆಕಾಶದಲ್ಲಿ ಕೇಂದ್ರೀಕರಿಸಿ ಮಾತಾಡುತ್ತಾನೆ.
6. ಎದುರುಗಡೆ ಇರುವವರು ಹುಲುಮಾನವರು ಎಂಬ ಧೋರಣೆ ಕಾಣುತ್ತದೆ.
7. ಅವನು ಮಾತಾಡಿದ್ದು ಯಾರಿಗೂ ಅರ್ಥವಾಗುವುದಿಲ್ಲ.
8. ಒಂದು ವಾಕ್ಯದ ನಡುವೆ ಹಲವು ವಿರಾಮಗಳಿರುತ್ತವೆ.
9. ಕ್ರಿಯಾಪದ ಬರುವ ಹೊತ್ತಿಗೆ ವಾಕ್ಯದ ಮೊದಲ ಭಾಗ 'ದಾಟಿ ಹೋದ ಊರಿನ ಹೆಸರಿನ ಹಾಗೆ' ಆಗಿರುತ್ತದೆ. ನೆನಪಾಗುತ್ತದೆ – ಆಗುವುದಿಲ್ಲ.
10. ಸಾಮಾನ್ಯವಾಗಿ ನೀವು ಏನು ಹೇಳುವಿರೋ ಅದರ ವಿರುದ್ಧದ ನಿಲುವು ಹೊಂದಿರುತ್ತಾನೆ.

ಸದ್ಯಕ್ಕೆ ಇಷ್ಟು ಸಾಕು ಎಂದರು. ''ಓಹ್, ಬುದ್ಧಿ ಅಂತರಂಗದ ಸಂಗತಿ ಎಂದು ತಿಳಿದಿದ್ದೆ. ಹೊರ ವೇಷ ಭೂಷಣಗಳಿಂದಲೇ ತಿಳಿಯಬಹುದಾದಷ್ಟು ಕ್ಷುಲ್ಲಕ ಸಂಗತಿ ಎಂದು ಹೊಳೆಯಲಿಲ್ಲ. ಇವರಿಗೆ ಬೇರೆ ಬಟ್ಟೆ ತೊಡಿಸಿ, ಕಣ್ಣಿನ ಶಸ್ತ್ರ ಚಿಕಿತ್ಸೆ ಮಾಡಿ ಬುದ್ಧಿನಾಶ ಮಾಡಿ ನಮ್ಮ ನಿಮ್ಮಂಥ ಸಾಮಾನ್ಯ ಮನುಷ್ಯರನ್ನಾಗಿ ಮಾಡಬಹುದು, ಅಲ್ಲವೇ?'' ಎಂದೆ.

ವ್ಯಂಗ್ಯ ಮನ ಮುಟ್ಟಿತೆಂದು ಕಾಣುತ್ತದೆ. ಹೇಳದೆ ಕೇಳದೆ ಕರೆ ಕಟ್ಟಾಯಿತು.

★★★

ಬುದ್ಧಿಯ ಕುರಿತು, ಬುದ್ಧಿಜೀವಿಗಳ ಕುರಿತು ಇಷ್ಟೊಂದು ವಿವೇಚನೆ ನಡೆಸಿ ನಾನೂ ಬುದ್ಧಿಜೀವಿಯಾಗುವ 'ಭಯ' ಕಾಡುತ್ತಿದೆ. ಅದೇ ನನ್ನ ಗೆಳೆಯರ ಸಂಶಯಾತ್ಮಕ ತೀರ್ಮಾನ ಕೂಡ, ತಾನೇ? ಆದರೆ ನಿರ್ಭಯನಾಗಿರಬೇಕೆಂದು ಗೌರೀಶ ಮಾಸ್ತರು, 'ಅಭೀ' ಎಂದು ವೇದವಾಕ್ಯ ಹುರಿದುಂಬಿಸುತ್ತಿರುವಾಗ ಹಿಂದೆ ಮುಂದೆ ನೋಡಲೇಕೆ? ಇಷ್ಟಾಗಿ ಬುದ್ಧಿಜೀವಿಯಾಗುವುದೆಂದರೆ ವಿಚಾರಕ್ರಾಂತಿಗೆ ಕರೆ ಕೊಟ್ಟ ಕುವೆಂಪು, ವಿಚಾರವಾದದ ಗೌರೀಶ, ಬಾಳ್ವೆಯೇ ಬೆಳಕು ಎಂದ ಕಾರಂತ, ಸಂಸ್ಕೃತಿ ಶೋಧಕ ಶಂಬಾ ಅವರಂಥ ಹಿರಿಯರ ಸಾಲಿನ ಕೆಳಗೆ ನಿಲ್ಲುವುದೆಂದಾಯಿತಲ್ಲವೇ? ತುಂಬಾ ಸಂತೋಷ, ಹಾಗಿದ್ದರೆ ನಾನೊಬ್ಬ ಬುದ್ಧಿಜೀವಿ!

ಈ ಹಂತದಲ್ಲಿ ನನ್ನ ಶೋಧನೆ ಇನ್ನೊಂದು ದಿಕ್ಕಿಗೆ ಹೊರಳಿತು. ಸುತ್ತುಮುತ್ತಲಿನ ಜಗತ್ತು